# ಸಿವಿಲ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

## ಸಿ.ಸಿ ನಂಃ **44 / 2017**

| | | |
|---|---|---|
| ಸಾಕ್ಷಿಯ ಹೆಸರಃ | ಎನ್.ವೈ. ಗುಂಡೂರಾವ್ | ಫ್ರಾಸಾಃ **06** |
| ತಂದೆ/ಗಂಡನ ಹೆಸರುಃ | ಯಲ್ಲಪ್ಪ | ಚಾಸಾಃ **38** |
| ವಯಸ್ಸುಃ | **42** ವರ್ಷ | ದಿಃ **06.11.2024** |
| ಉದ್ಯೋಗಃ | ಪೋಲಿಸ್ ವೃತ್ತ ನಿರೀಕ್ಷಕರು | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ದೇವದುರ್ಗಾ | |

ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ.ಅ.ರಿಂದಃ

ನಾನು ದಿಃ 13.06.2016 ರಿಂದ 15.03.2018 ರ ವರೆಗೆ ಪಿ.ಎಸ್.ಐ ಆಗಿ ಗುರುಮಿಠಕಲ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26-08-2016 ರಂದು ರಾಃ 08.00 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾಃ 1 ರವರು ಹಾಜರಾಗಿ ಟೈಪ್ ಮಾಡಿದ ದೂರು ಸಲ್ಲಿಸಿದ್ದು, ಅದನ್ನು ಪಡೆದು ಠಾಣಾ ಗುನ್ನೆ ನಂ.129/2016 ರಡಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಪ್ರ.ವ.ವರದಿ ಕಳುಹಿಸಿರುತ್ತೇನೆ. ನಂತರ ದಿಃ 27.08.2016 ರಂದು ಕಡತವನ್ನು ಮುಂದಿನ ತನಿಖೆಗಾಗಿ ಚಾಸಾಃ 39 ರವರಿಗೆ ಒಪ್ಪಿಸಿರುತ್ತೇನೆ.

ನಿಪಿ-5 ರ ದೂರಿನಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಬಿ), ಪ್ರ.ವ.ವರದಿ ನಿಪಿ-11 ಎಂದು ಸಾಕ್ಷಿಯ ಸಹಿ ನಿಪಿ-11(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಂ.ಬಿ.ಪಿ ವಕೀಲರಿಂದಃ

ಪ್ರಕರಣ ದಾಖಲಿಸಿಕೊಳ್ಳುವ ಮೊದಲು ಚಾಸಾಃ 1 ರವರನ್ನು ನಾನು ವಿಚಾರಣೆ ಮಾಡಿಲ್ಲ. ದೂರು ದಾಖಲಿಸುವ ಪೂರ್ವದಲ್ಲಿ ಚಾಸಾಃ 1 ರವರು ಠಾಣೆಗೆ ಬಂದಿರಲಿಲ್ಲ. ಚಾಸಾಃ 1 ರವರು ನೀಡಿದ ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣ ದಾಖಲೆಸಿಕೊಂಡಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ.